ಇವತ್ತೋ ಮುಖ್ಯಮಂತ್ರಿಗಳ ಹತ್ತಿರಕ್ಕೆ ನಮ್ಮ ಕ್ಷೇತ್ರದ ಒಂದು ಕೇಸ್ ಬರುತ್ತದೆ. ದಯಮಾಡಿ, ಈ ಬಗ್ಗೆ ಸಚಿವರು ಉತ್ತರ ಕೊಡಬೇಕು.

ಶ್ರೀ ಬಸವರಾಜ ಎಸ್.ಹೊರಟ್ಟಿ: ನಾನು ಅವರ ಉತ್ತರ ಹೇಳುವುದಿಲ್ಲ. ಮಾಧುಸ್ವಾಮಿಯವರು ಹೇಳಿದಂತೆ, ಇವತ್ತೇನು ಶಾಲ ಅಭಿವೃದ್ಧಿ ಸಮಿತಿಗಳಿವೆ, ಇವತ್ತು ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ–ತಾಯಿಗಳಿರಬೇಕೆನ್ನುವಂಥದ್ದು ಕೇಂದ್ರ ಸರ್ಕಾರದ ಸರ್ವಶಿಕ್ಷಣ ಅಭಿಯಾನದಲ್ಲಿ ಬಂದ ನಿಯಮ. ಆದರೀಗ ಕಾರಣಾಂತರಗಳಿಂದ ಅಲ್ಲಿರುವ defect ಗಳು ಮತ್ತು ಅಲ್ಲಿ ಕೆಲವರು ಹೆಬ್ಬೆಟ್ಟು ಒತ್ತುವವರಿರುತ್ತಾರೆ, ಕೆಲವರು ಬರುವ ಹಾಗಿಲ್ಲ, ಹೀಗಾಗಿ ಮೊನ್ನೆ ವಾಟಾಳ್ ನಾಗರಾಜ್‌ರವರು ಒಂದು ವಿಷಯ ಹೇಳಿದರು. ದಾನ ಕೊಟ್ಟವರ ಸೇವೆಯನ್ನು ಪರಿಗಣಿಸಿ ಅವರನ್ನು ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳೋಣ. ಅದೇ ರೀತಿ ಮಾಧುಸ್ವಾಮಿಯವರು ಹೇಳಿದ್ದು ನನಗೆ ಅನೇಕ ಸಾರಿ ಸೂಕ್ತವೆಂದು ಅನಸುತ್ತದೆ. ಇದರ ಬಗ್ಗೆ ಚರ್ಚೆಯೂ ಮಾಡಿದ್ದೇವೆ. ಈ ದೃಷ್ಟಿಯಿಂದ ಅದನ್ನು ಕಾನೂನು ಚೌಕಟ್ಟಿನಲ್ಲಿ ಅಕಸ್ಮಾತ್ ಹಾಗೇನಾದರೂ ಮಾಡಲಿಕ್ಕೆ ಬರುವುದಾದರೇ, ನಾನು ನೋಡಿ, ಕಾನೂನು ಏನಿದೆ ಎಂದು ತರಿಸಿ ನೋಡುತ್ತೇನೆ. ಇದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ. ಆ ಯೋಜನೆಯಲ್ಲಿ ಇದನ್ನೇನಾದರೂ ಮಾಡಲಿಕಾಗುತ್ತದೆಯೇ ಎಂದು ನೋಡುತ್ತೇನೆ. ನೋಡಿ, ಖಂಡಿತವಾಗಿ ನಾನು ಪರಿಶೀಲಿಸುತ್ತೇನೆ.

(ಆ) ಬೆಂಗಳೂರಿನ ಅತ್ತಿಗುಪ್ಪೆ ಶಾಲೆಯ ಕನ್ನಡ ಶಿಕ್ಷಕರನ್ನು ರಿಲೀವ್ ಮಾಡುವ ಬಗ್ಗೆ

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ಅತ್ತಿಗುಪ್ಪೆ ಶಾಲೆಯಲ್ಲಿನ ಕನ್ನಡ ಮಾಸ್ಟರ್ ಬಗ್ಗೆ ಪ್ರಸ್ತಾಪ ಮಾಡಿದಾಗ ಸಂಜೆ 5.30 ಗಂಟೆಯೊಳಗೆ ಆ ಮಾಸ್ಟರ್‌ನ್ನು ರಿಲೀವ್ ಮಾಡುತ್ತೇನೆಂದು ಮಾನ್ಯ ಸಚಿವರು ಭರವಸೆ ಕೊಟ್ಟು ಇವತ್ತಿಗೆ 5 ದಿವಸ ಆಯಿತು. ಆದರೆ, ಇದುವರೆಗೂ ಕೂಡ ಮಾಡಿಲ್ಲ. ಶಾಲೆಯಲ್ಲಿ ಕನ್ನಡ ವಿಷಯಕ್ಕೆ ಮಾಸ್ಟರ್ ಇಲ್ಲ.

ಶ್ರೀ ಎನ್. ಧರ್ಮಸಿಂಗ್: ಇವೆಲ್ಲವನ್ನು ಹೌಸ್‌ನಲ್ಲಿ ಎಷ್ಟು ಸಾರಿ ಕೇಳಬೇಕು?

ಅಧ್ಯಕ್ಷರು: ರಿಲೀವ್ ಮಾಡಿಸುತ್ತೇನೆಂದು ಅವತ್ತಿನ ದಿವಸ ಭರವಸೆ ಕೊಟ್ಟಿದ್ದೀರಿ. ರಿಲೀವ್, ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನೋಡಿ ಕ್ರಮ ತೆಗೆದುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿರುವ ವಿಷಯ ಏನೆಂದರೆ, ಬೆಂಗಳೂರು ನಗರ ಪ್ರದೇಶಗಳಾದ ಬಸವೇಶ್ವರ ನಗರ ಮತ್ತು ವಿಜಯನಗರ ಜನತೆಗೆ ಇವತ್ತಿನ ದಿವಸ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬರತಕ್ಕಂಥ ಕಲುಷಿತ ನೀರನ್ನು ಕುಡಿಯುತ್ತಿದ್ದಾರೆ. ಬೆಂಗಳೂರು ನೀರು ಸರಬರಾಜು ಮಂಡಳಿ ಇವತ್ತಿನ ದಿವಸ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಮುಖ್ಯಮಂತ್ರಿಯಾಗಿದಂಥ ಸಂದರ್ಭದಲ್ಲಿ ಜಪಾನ್ ಬ್ಯಾಂಕ್ ನೆರವಿನಿಂದ 3374 ಕೋಟಿ ರೂಪಾಯಿ.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಂಗನವಾಡಿ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಅವರು ಉತ್ತರ ಕೊಟ್ಟ ಮೇಲೆ ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಎನ್. ಧರ್ಮಸಿಂಗ್: ಈಗಾಗಲೇ ಅವರು ಉತ್ತರ ಕೊಟ್ಟಿರಬೇಕಲ್ಲವೇ? ಅವರು ಉತ್ತರ ಕೊಡಲಿ, ಆನಂತರ ನಾನು ಈ ವಿಷಯದ ಬಗ್ಗೆ ಮಾತನಾಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಶಿಕ್ಷಕರ ನೇಮಕಾತಿ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. 2005-06 ನೇ ಸಾಲಿನಲ್ಲಿ ಸುಮಾರು 11,313 ಅಂಗನವಾಡಿ ಕೇಂದ್ರಗಳು ಮಂಜೂರಾಗಿವೆ. ಇದಾದನಂತರ ಇವುಗಳಿಗೆ ಕಾರ್ಯಕರ್ತೆಯರ ಆಯ್ಕೆ ವಿಷಯಕ್ಕೆ ಸಂಬಂದಪಟ್ಟಂತೆ ಕಳೆದ ಜುಲೈನಲ್ಲಿ ಒಂದು ಆದೇಶವನ್ನು ಹೊರಡಿಸಿದ್ದೇವೆ. ಅದಕ್ಕೆ ಮಾನ್ಯ ಶಾಸಕರುಗಳು ಅಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಅದಕ್ಕೆ ಸಹ ಸದಸ್ಯರು ಹಾಗೂ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷೆಯೊಬ್ಬರು ಅದಕ್ಕೆ ಉಪಾಧ್ಯಕ್ಷರು ಮತ್ತು ನಮ್ಮ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿದ್ದೇವೆ. ಇಲ್ಲಿ ತಾವು ಒಂದನ್ನು ಗಮನಿಸಬೇಕು. ಇದು ಕೇಂದ್ರದ ಪುರಸ್ಕೃತ ICDS ಯೋಜನೆಯಾಗಿದ್ದು, ಇದನ್ನು ನಾವು ಜಾರಿ ಮಾಡಲೇ ಬೇಕು. 11,313 ಅಂಗನವಾಡಿ ಕೇಂದ್ರಗಳಲ್ಲಿ ಇಲ್ಲಿಯವರಗೆ ಆಗಿರತಕ್ಕಂಥ ಆಯ್ಕೆ ಕೇವಲ 8 ಸಾವಿರಕ್ಕಿಂತ ಹೆಚ್ಚಷ್ಟೆ. ಇನ್ನೂ

3 ಸಾವಿರ ಬಾಕಿ ಇದೆ. ಬಹಳ ಖೇದದ ವಿಷಯವೇನೆಂದರೆ, ನಮ್ಮ ಬಹಳಷ್ಟು ಶಾಸಕರು ಇನ್ನೂ ಕೂಡ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಲ್ಲ. ನಾನು ಅನೇಕ ಸಾರಿ ಮೌಕಿಕವಾಗಿ ಹೇಳಿದ್ದೇನೆ ಮತ್ತು ಪತ್ರ ಬರೆದು ಕೂಡ ಕೇಳಿಕೊಂಡಿದ್ದೇನೆ. ಮಾನ್ಯ ಮಾಧುಸ್ವಾಮಿಯವರ ಕ್ಷೇತ್ರದಲ್ಲಿಯೇ ಇನ್ನೂ ಮುಗಿದಿಲ್ಲ. ಆದರೂ ಕೂಡ ಹೇಳುವುದಕ್ಕೆ ಬಯಸುವುದೇನೆಂದರೆ, ಈ ಮಧ್ಯದಲ್ಲಿ ಸುಮಾರು 5 ತಿಂಗಳ ಅವಧಿಯವರೆಗೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಇತ್ತು. ನಾವು ಅದನ್ನು ಈಗ ತೆರೆವುಗೊಳಿಸಿದ್ದೇವೆ. ಇಷ್ಟೆಲ್ಲಾ ಆದರೂ ಕೂಡ 3 ಸಾವಿರ ಹುದ್ದೆಗಳು ಬಾಕಿ ಇವೆ. ಆದಷ್ಟು ಬೇಗ ಇದನ್ನು ಜಾರಿ ಮಾಡಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆ. ಆದರೆ ಈಗ ತಡವಾಗಿದ್ದರಿಂದ ಎಲ್ಲಾ ಕಡೆ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಿ ಸಹಾಯಕಿಯರನ್ನು ನೇಮಕ ಮಾಡಿದ್ದೇವೆ. 2006-07ನೇ ಸಾಲಿನಲ್ಲಿ 3,040 ಹೊಸ ಅಂಗನವಾಡಿ ಕೇಂದ್ರಗಳಿಗೆ ಮಂಜೂರಾತಿ ಬಂದಿದೆ. ಇವುಗಳನ್ನು ಸೆಪ್ಟಂಬರ್ ತಿಂಗಳೊಳಗಾಗಿ ಪ್ರಾರಂಭ ಮಾಡಲೇ ಬೇಕೆಂಬ ಕಡ್ಡಾಯ ಆದೇಶವನ್ನು ಕೇಂದ್ರ ಸರ್ಕಾರ ನಮಗೆ ಕಳುಹಿಸಿದೆ. ದಯಮಾಡಿ ಯಾವುದೇ ಕಾರಣಕ್ಕೆ ಮಾನ್ಯ ಶಾಸಕರುಗಳನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಬೇಡಿ, ತಾಲ್ಲೂಕು ಪಂಚಾಯತ್ ಅಧ್ಯಕ್ಷೆಯೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಮಾಡಿ ಸಮಿತಿಯನ್ನು ಪುನರ್ ರಚನೆ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಒಂದು ಆದೇಶ ಕಳೆದ ತಿಂಗಳು ನಮಗೆ ಬಂದಿದೆ. ಕೇಂದ್ರ ಸರ್ಕಾರದ ಆದೇಶಕ್ಕೆ ನಾವು ತಲೆಬಾಗಬೇಕಾಗುತ್ತದೆ. ಮತ್ತೆ ಇದರ ಜೊತೆಗೆ ಶೇಕಡ 35ರಷ್ಟು ಬಾಕಿ ಉಳಿದಿರತಕ್ಕಂಥ ಆಯ್ಕೆಯನ್ನು ದಯಮಾಡಿ ನಮ್ಮ ಶಾಸಕರು ಮಾಡಿ ಕೊಡಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಯಾರೋ ಮಾಹಿತಿಯನ್ನು ತಪ್ಪು ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಬಾಕಿ ಇರತಕ್ಕಂಥದನ್ನೆಲ್ಲಾ ನಾವು ಆಯ್ಕೆ ಮಾಡಿದ್ದೇವೆ. ವರ್ಗಾವಣೆ ಕೊಡಿ ಎಂದು ನೀವು ಹೇಳಿದ ಮೇಲೆ ವರ್ಗಾವಣೆ ಮಾಡಿ ಉಳಿದ ಹುದ್ದೆಗಳನ್ನು ಮಾಡುವುದರೊಳಗೆ ಹೈಕೋರ್ಟ್ ಸ್ಟೇ ಮಾಡಿತು. ಹೈಕೋರ್ಟ್‌ನಲ್ಲಿ ಸುಮಾರು 6 ರಿಂದ 7 ತಿಂಗಳವರೆಗೆ ಸ್ಟೇ ಆಗಿತ್ತು . ಸ್ಟೇ ವೆಕೇಟ್ ಆದ ಮೇಲೆ ನಮಗೆ 29ನೇ ತಾರೀಖಿನ ದಿವಸ ಪತ್ರ ಕೊಟ್ಟು 31 ನೇ ತಾರೀಖಿನೊಳಗೆ ಆಯ್ಕೆ ಪೂರ್ಣಗೊಳಿಸಿ ಎಂದು ಪತ್ರದಲ್ಲಿ ಬರೆಯುತ್ತೀರಿ. ನೀವು ಕಳುಹಿಸಿರುವ

ಪತ್ರವನ್ನು ನಾನು ಇಟ್ಟುಕೊಂಡಿದ್ದೇನೆ. ನಮ್ಮ ಕಛೇರಿಯಿಂದ ಬಂದಿರುವ ಕಾಗದವನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡಲೆ? ಮತ್ತೆ ಆಯ್ಕೆ ಮಾಡತಕ್ಕಂತದ್ದು ಕೇಂದ್ರ ಸರ್ಕಾರಕ್ಕೆ ಸಂಬಂಧವಿಲ್ಲ. ದಯಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಮುಂದುವರಿಸಬೇಕು. ಮತ್ತೆ ಇದರ ಆಯ್ಕೆ ನಮ್ಮಿಂದ ನಂತಿಲ್ಲ. ನಾವು ಈಗಾಗಲೇ ಪ್ರಥಮ ಹಂತದ ಆಯ್ಕೆ ಮುಗಿಸಿದ್ದೇವೆ. ವರ್ಗಾವಣೆಗಳನ್ನು ಎಪೆಕ್ಟ್ ಮಾಡಿ ಎಂದು ತಾವು ನರ್ದೇಶನ ಕೊಟ್ಟಿದ್ದೀರಿ. ವರ್ಗಾವಣೆ ಮಾಡಿದ ಮೇಲೆ ಅಲ್ಲಿದ್ದಂಥ ಖಾಲಿ ಹುದ್ದೆಗಳ ಆಯ್ಕೆ ಮಾತ್ರ ನಮ್ಮಲ್ಲಿ ಆಗಬೇಕಾಗಿದೆಯಷ್ಟೇ. ಇದನ್ನು ತಾವು ಸ್ವಲ್ಪ ಸೀರಿಯಸ್ ಆಗಿ ತೆಗೆದುಕೊಳ್ಳಿ. ನಾವು ಫ್ರೆಷ್ ಆಯ್ಕೆಯನ್ನು ನಲ್ಲಿಸಿಲ್ಲ. ಯಾರ್ಯಾರು ಹಳೆಯ ಕಾರ್ಯಕರ್ತೆಯರು ವರ್ಗಾವಣೆ ಕೇಳುತ್ತಾರೆಯೊ ಅದನ್ನು ಮಾಡಿ ಮುಗಿಸಬೇಕೆಂದು ತಾವು ನಿರ್ದೇಶನ ಕೊಟ್ಟಿದ್ದೀರಿ. ಅವರು ಅಲ್ಲಿ ರಿಪೋರ್ಟ್ ಮಾಡಿಕೊಳ್ಳಬೇಕು, ಅದನ್ನು ನೋಡಿ ಎಂದು ಕೂಡ ಹೇಳಿದ್ದೀರಿ. ಅದನ್ನು ಮುಗಿಸಿ ರಿಪೋರ್ಟ್ ಮಾಡುವ ದಿವಸ ಅವರನ್ನು ಆಯ್ಕೆ ಮಾಡುವುದಕ್ಕೆ ನಮಗೆ ಆಗಲಿಲ್ಲ. ಇನ್ನೊಂದು ಸಾರಿ ಆಯ್ಕೆ ಮಾಡುವುದರೊಳಗೆ ಕೋರ್ಟ್ ಸ್ಟೇ ಮಾಡಿತು. ಹೀಗಾಗಿ ತೊಂದರೆ ಆಗಿದೆಯಷ್ಟೇ. ದಯಮಾಡಿ ಹಳೆಯ ಸಮಿತಿಯನ್ನು ತಾವು ಮುಂದುವರೆಸಿಕೊಂಡು ಹೋಗಬೇಕು. ಕೇಂದ್ರ ಸರ್ಕಾರ ಇದರ ಬಗ್ಗೆ ನಿಮಗೆ ಡೈರೆಕ್ಷನ್ ಕೊಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸ್ಕೀಂ ಕೊಡಬಹುದಷ್ಟೇ. ಇದೆಲ್ಲಾ ತಾವು ಬೇರೆಯವರಿಗೆ ಹೇಳಿ, ದಯಮಾಡಿ ಹಳೆಯ ಸಮಿತಿಯನ್ನು ತಾವು ಮುಂದುವರೆಸಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತೆಯರ ವರ್ಗಾವಣೆ ವಿಷಯದಲ್ಲಿ ತುಂಬಾ ಒತ್ತಡಗಳು ಬಂದಿದ್ದವು. ಆದ್ದರಿಂದ ನಾವೇ ಅದನ್ನು ತಡೆ ಹಿಡಿದಿದ್ದೇವೆ.ಏಕೆಂದರೆ, ವರ್ಗಾವಣೆ ಮಾಡಿದರೆ ಆ ಗ್ರಾಮದವರು ಮತ್ತೆ ವಿರೋಧ ಮಾಡುವುದು ಮತ್ತೆ ನಮ್ಮ ಊರಿಗೆ ಒಂದು ಅವಕಾಶ ಹೋಯಿತೆಂದು ಅವರು ಹೇಳತಕ್ಕಂಥ ವ್ಯತ್ಯಾಸಗಳು ಆಗುತ್ತವೆ. ಧಾರವಾಡ ಮತ್ತು ಹಾಸನ ಜಿಲ್ಲೆ ಹಾಗೂ ಅರಸೀಕೆರೆ ತಾಲ್ಲೂಕು ಮತ್ತೆ ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಇನ್ನೂ ತಡೆಯಾಜ್ಞೆ ತೆರವಾಗಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಸ್ಟೇಯನ್ನು ತೆರವುಗೊಳಿಸುವುದಕ್ಕೆ ನಾವು ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ವಸ್ತುಸ್ಥಿತಿಯನ್ನು ಈಗಾಗಲೇ ವಿವರಿಸಲಾಗಿದೆ ಮತ್ತೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಸಚಿವರು ಹೇಳತಕ್ಕಂಥ ವಿಚಾರ ನೋಡಿದರೆ ನಿಮಗೆ ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲವೆಂದು ಕಾಣುತ್ತದೆ. ವರ್ಗಾವಣೆ ಮಾಡಿದ ಮೇಲೆ ನೀವು ಆಯ್ಕೆ ಮಾಡಬೇಕೆಂದು ನಮಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ಆ ಸುತ್ತೋಲೆಯನ್ನು ನಾವು ನಿಮಗೆ ತೋರಿಸುತ್ತೇವೆ. ವರ್ಗಾವಣೆಯಾದ ಮೇಲೆ ದೂರದಲ್ಲಿರತಕ್ಕಂಥವರನ್ನು ಹತ್ತಿರಕ್ಕೆ ಹಾಕಬೇಕೆಂದು ಸುತೋಲೆ ಕಳುಹಿಸಿ ವರ್ಗಾವಣೆಯಾದ ಮೇಲೆ ನೀವು ಆಯ್ಕೆ ಮಾಡಬೇಕೆಂದು ಹೇಳಿದ್ದೀರಿ. ವರ್ಗಾವಣೆ ಪ್ರಕ್ರಿಯೆ ಮುಗಿಯುವುದರೊಳಗೆ ಕೋರ್ಟ್‌ನಿಂದ ಸ್ಟೇ ಬಂತು ನೀವು ಆಯ್ಕೆ ಮಾಡಲಿಲ್ಲವೆಂದು ನೀವು ನಮ್ಮ ಮೇಲೆ ಹಾಕಿದರೆ ಹೇಗೆ? ಈಗ ಇರತಕ್ಕಂಥ ಸಮಿತಿಯೇ ಮುಂದುವರಿಯಬೇಕು.

ಅಧ್ಯಕ್ಷರು: ಆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡುತ್ತೀರೊ ಅಥವಾ ಇಲ್ಲವೊ ಎಂಬುದರ ಬಗ್ಗೆ ಮಾತ್ರ ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಜ್: ಕೇಂದ್ರ ಸರ್ಕಾರ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ನಾವು ಅಧ್ಯಕ್ಷರಾಗಬಾರದೆಂದು ಹೇಳುವುದಕ್ಕೆ ಅವರ್ಯಾರು? ಶಾಸಕರನ್ನು ಬಿಟ್ಟು ಬೇರೆಯವರನ್ನು ಉಪಾಧ್ಯಕ್ಷರನ್ನಾಗಿ ಮಾಡಿ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಆದ್ದರಿಂದ, ನೀವು ಶಾಸಕರಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಏನು ಮಾಡುತ್ತೀರೆಂಬುದನ್ನು ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಅಂತಿಮ ತೀರ್ಮಾನಕ್ಕೆ ಬರುತ್ತೇವೆ.

(ಇ) ವಿಷಯ: ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕಲುಷಿತಗೊಂಡಿರುವ ನೀರು ಸರಬರಾಜು ಆಗುತ್ತಿರುವ ಬಗ್ಗೆ

ಶ್ರೀ ಎನ್.ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಮಹತ್ವದ ಪ್ರಶ್ನೆಯನ್ನು ನಾನು ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈಗಾಗಲೇ ಗ್ರೇಟರ್ ಬೆಂಗಳೂರು ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಮಲ್ಲೇಶ್ವರಂ, ಬಸವೇಶ್ವರ ನಗರ, ರಾಜಾಜಿನಗರ ಪ್ರದೇಶಗಳಿಗೆ ಕಲುಷಿತ ನೀರು